ಕತೆ

# ಕಳ್ಳನೆಂದೆನಿಸಿದವ...



**ಕೃಷ್ಣಮೂರ್ತಿ ಹನೂರು**

ಕಲೆ: ವೆಂಕಟ್ರಮಣ ಭಟ್

ಅವಳ ಪರಿಚಯವಾದದ್ದು ವಿಶ್ವವಿದ್ಯಾಲಯದ ಆಡಳಿತ ಭವನದ ಮುಂದೆ. ಅದು ಎರಡನೇ ವರ್ಷದ ನಾಲ್ಕನೇ ಸೆಮಿಸ್ಟರ್ ಫೀಸು ಕಟ್ಟುವ ಸಂದರ್ಭದಲ್ಲಿ. ನಮಗಿಂತ ಮುಂದೆ ಹತ್ತು ಜನ ಸರತಿಯ ಸಾಲಿನಲ್ಲಿ ನಿಂತಿದ್ದರು. ಅವಳು ಇಂಗ್ಲಿಷ್ ಎಂ.ಎ.ಗೆ, ನಾನು ಕನ್ನಡ ಎಂ.ಎ. ತರಗತಿಗೆ ಫೀಸು ತುಂಬಬೇಕಿತ್ತು. ಕೈಯ್ಯಲ್ಲಿ ಒಂದೆರಡು ಪುಸ್ತಕ ಹಿಡಿದುಕೊಂಡಿದ್ದವಳು ಇದ್ದಕ್ಕಿದ್ದಂತೆಯೇ, 'ಪರ್ಸು, ಪರ್ಸು' ಅಂದಳು. ನನ್ನ ಕಡೆ ಅನುಮಾನವಾಗಿ ನೋಡಿದಳು. ಎಲ್ಲರೂ ನನ್ನತ್ತಲೇ ನೋಡತೊಡಗಿದರು. ಅವಳನ್ನು ಯಾರಾದರೂ ಮಾತನಾಡಿಸುವ ಅಗತ್ಯವಿತ್ತು. ನಾನೇ, 'ಪರ್ಸ್ ಅಂದರೆ? ಮನೆಯಲ್ಲೇ ಬಿಟ್ಟು ಬಂದ್ರಾ ಮೇಡಂ' ಅಂದೆ.

'ಇಲ್ಲಾ ಮನೆಯಿಂದ ಬಂದಿಲ್ಲ. ಊರಿಂದ ಟ್ರೈನ್ ಇಳಿದು ಸೀದ ಇಲ್ಲಿಗೇ ಬಂದೇ!'

'ಹಾಗಾದರೆ ಟ್ರೈನಿನಲ್ಲೇನಾದರೂ...'

'ಇಲ್ಲ ಇಲ್ಲ ರಿಕ್ಷಾದವನಿಗೆ ದುಡ್ಡು ಕೊಟ್ಟು ಲಗ್ಗೇಜು ಇಳಿಸಿಕೊಳ್ಳುವಾಗ ಅಲ್ಲೇ ಬಿಟ್ಟನೇ... ಈಗ ಅರ್ಜಿ ಕೊಟ್ಟು ಫೀಸು ಕಟ್ಟುವುದು ಇರಲಿ, ಹಾಸ್ಟೆಲಿನ ರೂಮು ನೋಡಿ ಲಗೇಜು ಇಟ್ಟು ಊರಿಗೆ ವಾಪಸು ಹೋಗುವುದೂ ಕಷ್ಟ' ಅಂದಳು. ಅವಳ ಕಣ್ಣೊಳಗೆ ನೀರೂರುವಲ್ಲಿ ನಾನು, 'ತಾಳಿ ಮೇಡಂ, ರಿಕ್ಷಾದವನು ಇಲ್ಲೇ ಹೊರಗೆ ನಿಂತಿದ್ದರೆ ನೋಡ್ತೀನಿ ಗಾಬರಿ ಬೀಳಬೇಡಿ' ಅಂದು ಹೊರಗೆ ಬಂದರೆ ಅಲ್ಲೇ ಅವನು ಬೀಡಿ ಸೇದಿಕೊಂಡು ನಿಂತಿದ್ದ. ಹುಡುಗಿ ಕೂತಿದ್ದ ಜಾಗದಲ್ಲೇ ದಪ್ಪ ಪರ್ಸೊಂದು ಇತ್ತು. ನಾನು 'ಅಣ್ಣಾ, ಒಳಗಡೆ ಫೀಸು ಕಟ್ಟದೆ ನಿಂತಿರೋ ಆ ಹುಡುಗೀದು ಪರ್ಸ್' ಅಂದೆ.

ರಿಕ್ಷಾದವನು, 'ನಾನು ಆಯಮ್ಮನ್ನ ಬಿಟ್ಟು ತಿರಗಿಸ್ಕಂಡು ವಾಪ್ಸು ಹೋಗ್ಬೇಕಾಗಿತ್ತು. ಪರ್ಸು ನೋಡಿದನಲ್ಲಾ, ತಾಳಪ್ಪ ಇನ್ನು ಹುಡುಗಿ ಓದಕ್ಕೆ ಬಂದಿರವ್ಳಂಗೆ ಕಾಣೆಸ್ತಳೆ. ಕಾಸು ಕಳಕಂಡು ನಂಗೆ ಶಾಪ ಆಕದು ಬ್ಯಾಡ ಅಂತ ಇಲ್ಲೇ ನಿಂತ್ಕಂಡೆ. ಅಷ್ಟಕ್ಕು ನಾನೇ ತಗಂಡೋಗಿ ಕೊಡ್ಬೋದಾಗಿತ್ತು. ಹೆಂಗ್ಸರ ಪರ್ಸು ಮುಟ್ಬಾರ್ದು, ವಳಗಡೆ ಏನೇನಿರ್ತದೋ ಅಂತ ಭಯ ಆಗಿ ಇಲ್ಲೇ ಉಳಕಂಡೆ...' ಅಂದ.

ನಾನು ರಿಕ್ಷಾದ ಸೀಟಿನ ಪರ್ಸು ಎತ್ತಿಕೊಂಡು ಅವನಿಗೆ ಥ್ಯಾಂಕ್ಸ್ ಹೇಳಿ ವಾಪಸಾಗೋಣವೆಂದರೆ ಅವನು, 'ಅದೆಲ್ಲ ಬ್ಯಾಡ ಗುರು, ನೀನು ಹೋಗಿ ಅಯಮ್ಮನ್ನೇ ಕರ್ಕಂಡು ಬಾ, ಅವಳೇ ಬಂದು ಪದಾರ್ಥನ ಎತ್ಕಂಡು ಹೋಗ್ಲಿ' ಅಂದ. ನಾನು ವಾಪಸಾಗುವಾಗ, 'ತಪ್ಪು ತಿಳಕಬ್ಯಾಡ ಬ್ರದರ್. ಎಲ್ಲ ಎಜುಕೇಟೆಡ್ಸೇ ಸರಿ. ಆದ್ರೆ ಈ ಕಾಲದಲ್ಲಿ ಯಾರು ಯಾರ್ನೂ ನಂಬಂಗಿಲ್ಲ' ಅಂದ. ಹುಡುಗಿಗೆ ಸುದ್ದಿ ಮುಟ್ಟಿಸಿದೆ. ರಿಕ್ಷಾದವನು ಪರ್ಸಿನೊಡನೆ ಅಲ್ಲೇ ನಿಂತಿರುವನೆಂಬ ಮಾತು ಕೇಳಿ, ಮುಖವೆಲ್ಲ ಜೀವ ತುಂಬಿಕೊಂಡು ಹೊರಗೆ ಬಂದು ಅವನೊಂದಿಗೆ ಏನು ಮಾತಾಡಬೇಕೋ ತಿಳಿಯದವಳಂತೆ ಕೊಂಚ ಉದ್ವೇಗ ಬಿದ್ದಳು. ಪರ್ಸು

